## ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ

ಸಿ. ಸಿ. ಸಂಖ್ಯೆಃ 18/2025

| ಪಿರ್ಯಾದುದಾರರು | ವಿರುದ್ಧ | ಆರೋಪಿ |
|---|---|---|
| ಸರ್ಕಾರದ ಪರವಾಗಿ,<br>ಗ್ರಾಮಾಂತರ ಪೊಲೀಸ್ ಠಾಣೆ,<br>ಭದ್ರಾವತಿ | | ಶ್ರೀ ಶಶಿಧರ |

**:: ಆರೋಪಣೆ ::**

ಶ್ರೀ ಎಸ್.ಶಶಿಧರ ಬಿನ್ ಸಿದ್ದಪ್ಪ,
ವಯಸ್ಸು 58 ವರ್ಷ,
ವಾಸಃ 3 ನೇ ತಿರುವು, ಗಗನ ನಿಲಯ,
ಗಾಂಧೀನಗರ, ಶಿವಮೊಗ್ಗ.

**ನಿಮ್ಮ ಮೇಲೆ ಇರುವ ಆರೋಪಣೆ ಇಂತಿದೆಃ**

ಮೊದಲನೆಯದಾಗಿ, ದಿನಾಂಕ 31/10/2024 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಭದ್ರಾವತಿ ತಾಲ್ಲೂಕು, ಹೆಚ್.ಕೆ ಜಂಕ್ಷನ್ ಗ್ರಾಮದಲ್ಲಿ, ಕೃಷ್ಣಪ್ಪರವರ ಅಡಿಕೆ ತೋಟದ ಬಳಿ, ಚಾಸಾ-1 ರವರ ತಮ್ಮ ಮಂಜುನಾಥ ಕೆಎ-66-ಎಲ್-6776 ರ ಮೋಟಾರ್ ಸೈಕಲನ್ನು ಚಲಾಯಿಸಿಕೊಂಡು ಹೋಗುತ್ತಿದ್ದಾಗ, ಆರೋಪಿತನು ಕೆಎ-14-ಎಂಎ-3116 ರ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮಂಜುನಾಥರವರು ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿ ಹೊಡೆಸಿ ಅಪಘಾತ ಪಡಿಸಿರುತ್ತಿರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ, ಮಂಜುನಾಥರವರ ಎದೆ, ಕೈ ಕಾಲುಗಳಿಗೆ ತೀವ್ರ ಪೆಟ್ಟು ಬಿದ್ದು, ಅಪಘಾತದಿಂದಾದ ಗಾಯಗಳಿಂದ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆ.1: ಈ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದೆಯಾ? ಅದು ನಿಮಗೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆ.2: ಈ ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತೀಯೋ ಅಥವಾ ವಿಚಾರಣೆ ಆಗಬೇಕೋ?
ಉತ್ತರಃ

(ಮೇಲಿನ ಆರೋಪಣೆಯನ್ನು ಆರೋಪಿತರಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ಭದ್ರಾವತಿ (ಟಿ.ಶ್ರೀಕಾಂತ್ )
ದಿನಾಂಕಃ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು ಭದ್ರಾವತಿ.